International Journal of Kannada Research
www.kannadajournal.com

ISSN: 2454–5813
IJKR 2018; 4(4): 42-44
© 2018 IJKR
www.kannadajournal.com
Received: 15-08-2018
Accepted: 19-09-2018

**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ, ಮಹಾರಾಣಿ
ಮಹಿಳಾ ಕಲಾ ಕಾಲೇಜು,
ಮೈಸೂರು, ಕರ್ನಾಟಕ, ಭಾರತ

**Correspondence**
**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ, ಮಹಾರಾಣಿ
ಮಹಿಳಾ ಕಲಾ ಕಾಲೇಜು,
ಮೈಸೂರು, ಕರ್ನಾಟಕ, ಭಾರತ

# ರಾಮಸಾಗರ ಪ್ರದೇಶಧ ವರದರಾಜಸ್ವಾಮಿ ದೇವಾಲಯ ಕುರಿತ ಒಂದು ಅವಲೋಕನ

**ಡಾ. ಎಸ್.ಕೆ.ದೇವೆಗೌಡ**

**DOI:** https://doi.org/10.22271/24545813.2018.v4.i4a.852

**ಪೀಠಿಕೆ**

ವೈಷ್ಣವ ಧರ್ಮವು ವಿಷ್ಣುವಿನ ಆರಾಧನೆ ಮತ್ತು ಸ್ವೀಕಾರವಾಗಿದೆ. ಮಹಾವಿಷ್ಣುವಿನ ವಿವಿಧ ಅವತಾರಗಳಲ್ಲಿ – ಆ ಅವತಾರಗಳು ದೈವಿಕತೆಯ ಪರಮೋಚ್ಚ ಅಭಿವ್ಯಕ್ತಿಯಾಗಿದೆ. ಸುದೀರ್ಘ ಮತ್ತು ಸಂಕೀರ್ಣ ಬೆಳವಣಿಗೆಯ ಸಮಯದಲ್ಲಿ ಅನೇಕ ವೈಷ್ಣವ ಗುಂಪುಗಳು ವಿಭಿನ್ನ ನಂಬಿಕೆಗಳು ಮತ್ತು ಗುರಿಗಳೊಂದಿಗೆ ಹೊರಹೊಮ್ಮಿದವು. ವಿಷ್ಣುವನ್ನು ಎಲ್ಲಾ ವ್ಯಾಪಿಸಿರುವವರು ಮತ್ತು ಲಕ್ಷ್ಮಿ ದೇವತೆಯನ್ನು ಸರ್ವೋಚ್ಚ ದೇವತೆಗಳಾಗಿ ಹಿಡಿದಿಟ್ಟುಕೊಳ್ಳುವ ಹಿಂದೂಗಳ ನಂಬಿಕೆ ಮತ್ತು ಆಚರಣೆಗಳಿಗೆ ವೈಷ್ಣವರು ನೀಡಿದ ಹೆಸರು. ಸಂಸ್ಕೃತ ಪದ ವೈಷ್ಣವ ಎಂದರೆ ವಿಷ್ಣುವಿನ ಅನುಯಾಯಿಯೆ ಆಗಿರುತ್ತಾರೆ.

ವೇದಗಳು ಮತ್ತು ಅನಂತರದ ಸಂಸ್ಕೃತ ಸಾಹಿತ್ಯದಲ್ಲಿ ಕಂಡುಬರುವ ವಿಷ್ಣುವಿನ ಭಕ್ತಿ, ಅನೇಕ ಸ್ಥಳೀಯ ದೇವತೆಗಳ ಮತ್ತು ಗ್ರಂಥಗಳ ಆರಾಧನೆಯೊಂದಿಗೆ ಸಂಯೋಜಿಸಲ್ಪಟ್ಟಿತು. ಅಂತಿಮವಾಗಿ ವೈಷ್ಣವ ನಂಬಿಕೆಗೆ ಕಾರಣವಾಯಿತು. ವೈಷ್ಣವರು ವಿಷ್ಣುವಿನ ಅನೇಕ ಅವತಾರಗಳನ್ನು ಪೂಜಿಸುತ್ತಾರೆ. ವಿಶೇಷವಾಗಿ ರಾಮ ಮತ್ತು ಕೃಷ್ಣನಾಗಿ ಅವನ ನೋಟಗಳು. ಹಾಗೆಯೇ ಹಲವಾರು ದೇವಾಲಯಗಳಲ್ಲಿ ಸಾಂಕೇತಿಕ ರೂಪದಲ್ಲಿ ಅವನ ಅಭಿವ್ಯಕ್ತಿಗಳು. ದೇವಾಲಯಗಳಲ್ಲಿನ ಈ ಅಭಿವ್ಯಕ್ತಿಗಳನ್ನು ಪೂಜಿಸಬಹುದಾದ ರೂಪದಲ್ಲಿ ವಿಷ್ಣುವಿನ ನಿಜವಾದ ಅವತಾರವೆಂದು ಪರಿಗಣಿಸಲಾಗುತ್ತದೆ. ಇದರ ಜೊತೆಯಲ್ಲಿ ಅನೇಕ ವೈಷ್ಣವರು ವಿವಿಧ ಕವಿ–ಸಂತರು ಮತ್ತು ದೇವತಾಶಾಸ್ತ್ರಜ್ಞರನ್ನು ಅವರು ಮಾದರಿ ಭಕ್ತರೆಂದು ಪರಿಗಣಿಸುತ್ತಾರೆ. ವೈಷ್ಣವ ಸಿದ್ಧಾಂತಗಳ ಹಲವಾರು ಸಂಪ್ರದಾಯಗಳಿವೆ. ಆದರೆ ವೈಷ್ಣವ ಅವುಗಳಲ್ಲಿ ಯಾವುದಾದರೂ ಒಂದು ಸಂಬಂಧವನ್ನು ಹೊಂದಿರಬೇಕಾಗಿಲ್ಲ. ವೈಷ್ಣವ ಧರ್ಮವನ್ನು ಅನುಸರಿಸುವ ಹಿಂದೂಗಳ ನಿಖರ ಸಂಖ್ಯೆಯನ್ನು ನಿರ್ಧರಿಸುವುದು ಕಷ್ಟ.

ಭಾರತದಲ್ಲಿ ಪ್ರಾಚೀನ ಸಂಸ್ಕೃತ ಪವಿತ್ರ ಸಂಯೋಜನೆಗಳಾದ ವೇದಗಳಲ್ಲಿ ವಿಷ್ಣುವು ಕಾಣಿಸಿಕೊಂಡರೆ, ಅವನು ಒಂದು ಸಹಸ್ರಮಾನದ ಅನಂತರ ಪ್ರಬಲ ಮತ್ತು ಸರ್ವೋಚ್ಚ ದೇವತೆಯಾದನು ಎಂದು ನಂಬಲಾಗಿದೆ. ವೈಷ್ಣವ ನಂಬಿಕೆಯ ವಿಶಿಷ್ಟ ಗುಣಲಕ್ಷಣಗಳು, ವಿಷ್ಣುವನ್ನು ಮಾತ್ರ ಮೋಕ್ಷವನ್ನು ನೀಡಬಲ್ಲ ಸರ್ವೋಚ್ಚ ಜೀವಿ ಎಂದು ಎತ್ತಿಹಿಡಿಯುತ್ತದೆ. ಭಾರತೀಯ ಸಂದರ್ಭದಲ್ಲಿನ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತದ ಸಂಯೋಜನೆಗಳೊಂದಿಗೆ ಬಲವನ್ನು ಸಂಗ್ರಹಿಸಿದೆ ಮತ್ತು ವಿಶೇಷವಾಗಿ ಭಗವದ್ಗೀತೆಯೊಂದಿಗೆ ಮಹಾಭಾರತದ ಒಂದು ವಿಭಾಗವೇ ಆಗಿರುತ್ತದೆ.

ಮೊದಲ ಸಹಸ್ರಮಾನದ ವಿಷ್ಣುವು ನಾರಾಯಣ ಮತ್ತು ವಾಸುದೇವ ದೇವತೆಗಳೊಂದಿಗೆ ಗುರುತಿಸಿಕೊಂಡರು. ನಾರಾಯಣನು ಮಹಾಭಾರತ ಸೇರಿದಂತೆ ಹಲವಾರು ಗ್ರಂಥಗಳಲ್ಲಿ ಹಾಗೆಯೇ ಆಗಮಾಸ್ ಎಂದು ಕರೆಯಲ್ಪಡುವ ದೇವಿಯ ಸಂಪ್ರದಾಯಗಳಿಗೆ ಸಂಬಂಧಿಸಿದ ಪುಸ್ತಕಗಳಲ್ಲಿ ಶ್ಲಾಘಿಸಲ್ಪಟ್ಟ ಒಬ್ಬ ಸರ್ವೋಚ್ಚ ದೇವತೆಯೆ ಆಗಿರುತ್ತಾನೆ. ಎರಡನೇ ಶತಮಾನದ ಪುರಾತತ್ವಶಾಸ್ತ್ರದ ಪುರಾವೆಗಳು ವಾಸುದೇವನನ್ನು ವಾಯುವ್ಯ ಮತ್ತು ಮಧ್ಯ ಭಾರತದಲ್ಲಿ ಪೂಜಿಸಲಾಗಿದೆ ಎಂದು ಸೂಚಿಸುತ್ತದೆ.

ಇಂತಹ ಹಲವು ನಾಮಗಳನ್ನು ಹೊಂದಿರುವ ಮಹಾವಿಷ್ಣುವಿನ ಒಂದು ದೇವಾಲಯವೆ ಈ ವರದರಾಜ ಸ್ವಾಮಿ ದೇವಾಲಯವಾಗಿದೆ. ತುರುವೇಕೆರೆಯಿಂದ 20ಕಿ.ಮೀ. ದೂರದ ರಾಮಸಾಗರ ಎನ್ನುವ ಗ್ರಾಮದ ಸ್ಥಳ ನಾಮದಲ್ಲಿ ರಾಮ ಮತ್ತು ಸಾಗರ ಎನ್ನುವ ಎರಡು ಘಟಕಗಳಿವೆ. ಇಲ್ಲಿ ರಾಮ ಎನ್ನುವ ವ್ಯಕ್ತಿಯ ಸೂಚನೆಯು ಕಾಣುತ್ತದೆ. ಇನ್ನು ಸಾಗರ ಎಂಬುದು ಸಮುದ್ರೋಪಾದಿಯ ಕೆರೆಯನ್ನು ಸೂಚಿಸುತ್ತದೆ. ಮಾಯಸಂದ್ರದಿಂದ 30 ಕಿ.ಮೀ ದೂರದಲ್ಲಿ ರಾಮಸಾಗರ ಗ್ರಾಮ ಕಂಡುಬರುತ್ತದೆ. ಊರಿನ ಪೂರ್ವ ಭಾಗಕ್ಕೆ ಉತ್ತರಾಭಿಮುಖವಾಗಿ ಈ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ. ಇದು ಏಕಕೂಟ ದೇವಾಲಯವಾಗಿದ್ದು ಒಂದು ಗರ್ಭಗೃಹ, ಸುಖನಾಸಿ, ನವರಂಗ, ಮಹಾಮಂಟಪ, ದ್ವಾರ ಮಂಟಪ ಕಂಡುಬರುತ್ತವೆ. ಈ ದೇವಾಲಯದ ನಿರ್ಮಾಣ ಕಾಲಕ್ಕೆ ಸಂಬಂಧಪಟ್ಟ ಯಾವುದೇ ಶಾಸನಾಧಾರಗಳು ದೊರೆತಿಲ್ಲ. ದೇವಾಲಯದ ಕಲಾಶೈಲಿಯನ್ನು ಗಮನಿಸಿದಾಗ ಇದು ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿದೆ ಎಂಬ ಅಭಿಪ್ರಾಯಕ್ಕೆ ಬರಬಹುದು.

**ಗರ್ಭಗೃಹ:** ಗರ್ಭಗೃಹವು 8x8 ಅಡಿ ಉದ್ದ ಮತ್ತು ಅಗಲವಾಗಿದ್ದು, ಚೌಕಾಕಾರವಾಗಿದೆ. ಮಧ್ಯ ಭಾಗದಲ್ಲಿ ಎರಡು ಅಡಿ ಎತ್ತರದ ಪದ್ಮ ಪೀಠದ ಮೇಲೆ ವರದರಾಜಸ್ವಾಮಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಚತುರ್ಭುಜವನ್ನು ಹೊಂದಿರುವ ಈ ದೇವನು ಕೈಗಳಲ್ಲಿ ಶಂಖ, ಚಕ್ರ, ಗಧ ಮತ್ತು ವರದ ಹಸ್ತವನ್ನು ಹೊಂದಿದ್ದಾನೆ. ಮೈಮೇಲೆ ವಿವಿಧ ಬಗೆಯ ಆಭರಣಗಳು, ಯಜ್ಞೋಪವೀತ ಹೊಂದಿದ್ದು ಸಮ ಭಂಗಿಯಲ್ಲಿ ನಿಂತಿದ್ದಾನೆ. ತಲೆಯ ಮೇಲೆ ಕಿರೀಟವನ್ನು ರಚಿಸಲಾಗಿದೆ. ಈ ದೇವ ಮೂರ್ತಿಯ ಹಿಂದೆ ಪಂಚ ಲೋಹದಲ್ಲಿ ಮಾಡಲಾದ ಪ್ರಭಾವಳಿ ಇದೆ. ಪುಷ್ಪಾಲಂಕೃತವಾದ ಈ ಪ್ರಭಾವಳಿಯ ಮೇಲ್ಭಾಗದಲ್ಲಿ ಕೀರ್ತಿ ಮುಖವಿದೆ. ಈ ಮೂರ್ತಿ ಶಿಲ್ಪದ ಇಕ್ಕೆಲಗಳಲ್ಲಿ ನಾಗ ಸರ್ಪಗಳು ಬಂಧನದಲ್ಲಿರುವಂತೆ ಕಲ್ಲಿನಲ್ಲಿ ಕೆತ್ತಲಾಗಿದೆ. ಗರ್ಭಗುಡಿಯ ಭಿತ್ತಿಗೆ ಇತ್ತೀಚೆಗೆ ಬಿಳಿವರ್ಣದ ಟಿಪಲ್ಸ್‌ಗಳನ್ನು ಹಾಕಲಾಗಿದ್ದು ಮೇಲ್ಛಾವಣಿಯಲ್ಲಿ ನಕ್ಷತ್ರಾಕಾರದ ಭುವನೇಶ್ವರಿ ಕಂಡುಬರುತ್ತದೆ. ಇದರ ಮಧ್ಯದಲ್ಲಿ ಕಮಲದ ಪುಷ್ಪವಿದೆ. ಈ ದೇವಾಲಯವು ಸಂಪೂರ್ಣವಾಗಿ ಕಣ ಶಿಲೆಯಲ್ಲಿ ನಿರ್ಮಾಣವಾಗಿದ್ದು ಶಿಲ್ಪ ಮೂರ್ತಿಗಳು ಬಳಪದ ಕಲ್ಲಿನಲ್ಲಿ ಕೆತ್ತಲ್ಪಟ್ಟಿವೆ. ಗರ್ಭಗೃಹದ ಬಾಗಿಲು ಸರಳವಾಗಿದ್ದು ಲಲಾಟ ಬಿಂಬದಲ್ಲಿ ಯಾವುದೇ ಕೆತ್ತನೆಯು ಕಂಡುಬರುವುದಿಲ್ಲ.

**ಸುಖನಾಸಿ:** ಸುಖನಾಸಿಯು ಗರ್ಭಗೃಹದಷ್ಟೇ ಉದ್ದ ಮತ್ತು ಅಗಲ ಹೊಂದಿದ್ದು ಚೌಕಾಕಾರವಾಗಿದೆ. ಸುಖನಾಸಿಯಲ್ಲಿ ಯಾವುದೇ ಮೂರ್ತಿ ಶಿಲ್ಪಗಳು ಕಂಡುಬರುವುದಿಲ್ಲ. ನೆಲಕ್ಕೆ ಇತ್ತೀಚೆಗೆ ಗ್ರಾನೈಟ್ ಶಿಲೆಯನ್ನು ಹಾಸಲಾಗಿದೆ. ಸುಖನಾಸಿಯ ಮೇಲಾವಣಿಯಲ್ಲಿ ಭುವನೇಶ್ವರಿಯನ್ನು ನಿರ್ಮಿಸದೇ ಕಣ ಶಿಲೆಯ ಕಲ್ಲ ಚಪ್ಪಡಿಗಳನ್ನು ಹಾಸಿ ಮೇಲ್ಛಾವಣಿಯನ್ನು ನಿರ್ಮಿಸಲಾಗಿದೆ.

**ನವರಂಗ:** ನವರಂಗವು 25x25 ಉದ್ದ ಮತ್ತು ಅಗಲವಾಗಿದ್ದು ಚೌಕಾಕಾರವಾಗಿದೆ. ನವರಂಗದ ಮಧ್ಯದಲ್ಲಿ ಆರು ಅಡಿ ಎತ್ತರವಿರುವ ನಾಲ್ಕು ಕಂಬಗಳಿವೆ. ಕಂಬಗಳು ಹದಿನಾರು ಮೂಲೆಗಳನ್ನು ಹೊಂದಿದ್ದು ವಿಜಯನಗರ ಶೈಲಿಯಲ್ಲಿದ್ದು ಗಾಲಿಯಾಕಾರದ ಬೋಧಿಗೆ ಹೊಂದಿವೆ. ಪದ್ಮ ಪುಷ್ಪದಂತಿರುವ ಘಟ, ಆಧಾರ ಬೋಧಿಗೆಯನ್ನು ಹೊಂದಿದೆ. ಕಂಬಗಳ ಮೇಲೆ ವಿಷ್ಣು, ಯೋಗನರಸಿಂಹ ಮುಂತಾದ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಕಣ ಶಿಲೆಯ ಕಲ್ಲು ಚಪ್ಪಡಿಗಳನ್ನು ಹಾಕಿ ಮೇಲ್ಛಾವಣಿ ನಿರ್ಮಿಸಲಾಗಿದ್ದು ಮಧ್ಯಭಾಗದಲ್ಲಿ ನಕ್ಷತ್ರಾಕಾರದ ಭುವನೇಶ್ವರಿ ಕಂಡುಬರುತ್ತದೆ. ಭುವನೇಶ್ವರಿಯ ಮಧ್ಯಭಾಗದಲ್ಲಿ ಅರಳಿದ ಕಮಲದ ಪುಷ್ಪವನ್ನು ಬಿಡಿಸಲಾಗಿದೆ. ನವರಂಗ ಬಲಭಾಗದಲ್ಲಿ ಉತ್ತರಾಭಿಮುಖವಾಗಿ ನಕ್ಷತ್ರಾಕಾರದ ಪೀಠದ ಮೇಲೆ ವೈಷ್ಣವ ಯತಿಶ್ರೀ ರಾಮಾನುಜಚಾರ್ಯರ ಮೂರ್ತಿ ಶಿಲ್ಪವನ್ನು ಇರಿಸಲಾಗಿದೆ. ಪದ್ಮಾಸದಲ್ಲಿ ಕೈಮುಗಿದು ಕುಳಿತಿರುವಂತೆ ರಚಿಸಿ ಮೈ ಮೇಲೆ ಯಜ್ಞೋಪವೀತ ಕರ್ಣಕುಂಡಲ ಮುಂತಾದ ಕೆತ್ತನೆಗಳಿವೆ. ಶಾಂತ ಚಿತ್ತದ ಈ ಮೂರ್ತಿ ಶಿಲ್ಪವು ಬಹು ಸುಂದರವಾಗಿ ಮೂಡಿ ಬಂದಿದೆ. ಪಕ್ಕದಲ್ಲಿ ನಕ್ಷತ್ರಾಕಾರದ ಪೀಠದ ಮೇಲೆ ವಿಷ್ಣುವಿನ ಅವತಾರಕ್ಕೆ ಸಂಬಂಧಿಸಿದ ಶಿಲವೊಂದಿದ್ದು ಸುಮಾರು ನಾಲ್ಕು ಅಡಿ ಎತ್ತರವನ್ನು ಹೊಂದಿದೆ. ಶಂಕ, ಚಕ್ರ, ಗಧಾ ಮತ್ತು ಕಟಿ ಹಸ್ತವನ್ನು ಒಳಗೊಂಡಿದ್ದು ಮೈ ಮೇಲೆ ವಿವಿಧ ಬಗೆಯ ವಸ್ತ್ರಾಭರಣಗಳು, ಪ್ರಭಾವಳಿ, ಕೀರ್ತಿಮುಖ ಮುಂತಾದವುಗಳು ಸಹಜವಾಗಿ ಮೂಡಿ ಬಂದಿವೆ.

**ಮುಖಮಂಟಪ:** ದೇವಾಲದ ಮುಂಭಾಗದಲ್ಲಿ ತೆರೆದ ಮುಖಂಟಪ ಕಂಡುಬರುತ್ತದೆ, ವಿಜಯನಗರ ಶೈಲಿಯ ಎರಡು ಪ್ರಧಾನ ಕಂಬಗಳ ಮೇಲೆ ಕಲ್ಲಿನ ತೊಲೆಗಳನ್ನು ಹಾಕಿ ಕಲ್ಲು ಚಪ್ಪಡಿಗಳಿಂದ ಮೇಲ್ಛಾವಣಿ ನಿರ್ಮಿಸಲಾಗಿದೆ. ಭಕ್ತಾದಿಗಳ ವಿಶ್ರಾಂತಿಗಾಗಿ ಎರಡೂ ಕಡೆ ಕಕ್ಷಾಸನವನ್ನು ನಿರ್ಮಿಸಲಾಗಿದೆ. ಕಕ್ಷಾಸನದ ಪಕ್ಕದಲ್ಲಿ ಬಳಪದ ಕಲ್ಲಿನಲ್ಲಿ ಮಾಡಲಾದ ಬಲಿ ಪೀಠವಿದೆ.

**ಮಹಾಮಂಟಪ:** ನವರಂಗದ ಮುಂಬಾಗದಲ್ಲಿ ಮಂಟಪವನ್ನು ನಿರ್ಮಾಣ ಮಾಡಲಾಗಿದ್ದು ಸಹಾ 25x25 ಅಡಿ ಉದ್ದ ಮತ್ತು ಅಗಲವಾಗಿದ್ದು ಚೌಕಾಕಾರವಾಗಿದೆ. ಸುಮಾರು ಆರು ಅಡಿ ಎತ್ತರವಿರುವ ನಾಲ್ಕು, ಎಂಟು ಮತ್ತು ಹದಿನಾರು ಮುಖವಿರುವ ಕಂಬಗಳನ್ನು ನಿಲ್ಲಿಸಿ ಮಹಾಮಂಟಪ ನಿಮಿಸಲಾಗಿದೆ. ಇಂತಹ ಹದಿನಾರು ಕಂಬಗಳು ಗೋಡೆಗೆ ಹೊಂದಿಕೊಂಡಂತೆ ಕಂಡುಬರುತ್ತವೆ. ಮಹಾಮಂಟಪಕ್ಕೆ ಗಾಳಿ ಬೆಳಕಿನ ವ್ಯವಸ್ಥೆಗೆ ದೊಡ್ಡ ದೊಡ್ಡ ಜಾಲಾಂಧ್ರಗಳನ್ನು ಗೋಡೆಗೆ ಅಳವಡಿಸಲಾಗಿದೆ. ಕಂಬಗಳ ಪೀಟ ಭಾಗದಲ್ಲಿ ಭಕ್ತ ದಂಪತಿಗಳು, ಆಂಜನೇಯ, ಮುಂತಾದ ಉಬ್ಬು ಶಿಲ್ಪಗಳ ಕೆತ್ತನೆಯನ್ನು ಮಾಡಲಾಗಿದೆ. ಮೇಲ್ಛಾವಣಿಯಲ್ಲಿ ನಕ್ಷತ್ರಾಕಾರದ ಭುವನೇಶ್ವರಿಯನ್ನು ಕಾಣಬಹುದು.

**ದ್ವಾರಮಂಟಪ:** ದೇವಾಲಯಕ್ಕೆ ಪ್ರವೇಶಿಸಲು ಮಹಾ ದ್ವಾರವನ್ನು ನಿರ್ಮಾಣ ಮಾಡಲಾಗಿದ್ದು, ದ್ವಾರ ಮಂಟಪವನ್ನು ಸಹ ಒಳಭಾಗ ಹಾಗೂ ಹೊರ ಭಾಗದಲ್ಲಿ ವಿಜಯನಗರ ಶೈಲಿಯ ವೃತ್ತಾಕಾರವಾದ ಎರಡೆರಡು ಕಂಬಗಳನ್ನು ನಿಲ್ಲಿಸಿ ಅವುಗಳ ಮೇಲೆ ಕಣ ಶಿಲೆಯ ಕಲ್ಲು ಚಪ್ಪಡಿಗಳನ್ನು ಹಾಸಿ ಮೇಲ್ಛಾವಣಿ ನಿರ್ಮಿಸಲಾಗಿದೆ. ಮಂಚಬಂಧ ಅದಿಷ್ಠಾನದ ಮೇಲೆ ನಿರ್ಮಾಣವಾಗಿರುವ ಈ ದ್ವಾರಮಂಟಪದ ಬಾಗಿಲು ಸರಳವಾಗಿದ್ದು ಮೇಲ್ಭಾಗದಲ್ಲಿ ಕೂಡುಗಳ ರಚನೆಯಿದೆ. ಒಳ ಹಾಗೂ ಹೊರ ಭಾಗಗಳಲ್ಲಿ ಚೌಕಾಕರದ ವೇದಿಕೆಯನ್ನು ನಿರ್ಮಿಸಲಾಗಿದೆ.


**ಅದಿಷ್ಠಾನ:** ಅದಿಷ್ಠಾನವು 3 ಅಡಿ ಎತ್ತರವಿದ್ದು ಕಣ ಶಿಲೆಯನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಮೂರು ಪಟ್ಟಿಕೆಗಳಿದ್ದು ಹಿನ್ಸರಿತ ಮತ್ತು ಮುನ್ಸರಿತದಂತೆ ಜೋಡಿಸಲಾಗಿದೆ. ಯಾವುದೇ ಅಲಂಕರಣೆ ಇಲ್ಲದೆ ಸರಳವಾಗಿದೆ.

**ಭಿತ್ತಿ:** ಕಣಶಿಲೆಯ ಕಲ್ಲು ಚಪ್ಪಡಿಗಳಿಂದ ಭಿತ್ತಿಯನ್ನು ನಿರ್ಮಿಸಲಾಗಿದ್ದು ಯಾವುದೇ ಭಿತ್ತಿ ಶಿಲ್ಪಗಳು ಕಂಡುಬರುವುದಿಲ್ಲ. ಮಹಾಮಂಟಪದ ಭಿತ್ತಿಯಲ್ಲಿ ದೊಡ್ಡ ದೊಡ್ಡ ಜಾಲಾಂದ್ರಗಳನ್ನು ಉಪಯೋಗಿಸಲಾಗಿದೆ, ಉಳಿದಂತೆ ದೇವಾಲಯದ ಸುತ್ತಲೂ ಭಿತ್ತಿ ಸರಳವಾಗಿದೆ.

**ಕಪೋತ:** ಕಪೋತವು ಒಂದು ಅಡಿ ಮುಂಚಾಚಿದ್ದು ಸರಳವಾಗಿದೆ. ಆದರೆ ಮಹಾಮಂಟಪದ ಕಪೋತವನ್ನು ಬೆಣಚುಕಲ್ಲಿನ ಚಪ್ಪಡಿಗಳನ್ನು ಇಳಿಜಾರಾಗಿ ಮಾಡಿ ನಿರ್ಮಿಸಲಾಗಿದೆ. ಮಳೆಯ ನೀರು ಛಾವಣಿಯಿಂದ ಹೊರಬರಲು ಅಲ್ಲಲ್ಲಿ ಪ್ರನಾಳಗಳ ರಚನೆಯನ್ನು ಕಾಣಬಹುದು.

**ಶಿಖರ:** ಪ್ರಾಚೀನ ದೇವಾಲಯದ ಶಿಖರವನ್ನು ಈಗ ಹೋಸದಾಗಿ ಜೀರ್ಣೋದ್ದಾರ ಗೊಳಿಸಲಾಗಿತ್ತಿದೆ. ಶಿಖರದ ನಾಲ್ಕು ದಿಕ್ಕುಗಳಲ್ಲಿಯೂ ದೇವದೇತೆಯರ ಮೂರ್ತಿಶಿಲ್ಪಗಳನ್ನು ಕಾಣಬಹುದು. ಸ್ತೂಫಿಯ ನಾಲ್ಕು ದಿಕ್ಕುಗಳಲ್ಲಿ ಕೀರ್ತಿಮುಖಗಳನ್ನು ನಿರ್ಮಾಣಮಾಡಲಾಗಿದೆ. ಮೇಲ್ಭಾಗದಲ್ಲಿ ಕಳಶ ಇರಿಸಲಾಗಿದೆ.

**ಪ್ರಾಕಾರ:** ಗಾರೆ ಮತ್ತು ಕಲ್ಲುಗಳಿಂದ ಇತ್ತೀಚೆಗೆ ಪ್ರಕಾರ ನಿರ್ಮಿಸಲಾಗಿದೆ. ದೇವಾಲಯದ ಮುಂದೆ ಸುಮಾರು 20 ಅಡಿ ಎತ್ತರದ ಗರುಡಸ್ತಂಭವನ್ನು ಸ್ಥಾಪಿಸಲಾಗಿದೆ. ದೇವಾಲಯಕ್ಕೆ ಏರಿಬರಲು ಸೋಪಾನ ನಿರ್ಮಿಸಲಾಗಿದೆ.








**ಗ್ರಂಥಋಣ**

1. ಕನ್ನಡ ವಿಷಯ ವಿಶ್ವಕೋಶ, ಸಂಪುಟ–9, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2. ತುಮಕೂರು ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, 1969
3. ಸಿ.ಹಯವದನರಾವ್, Mysore Gazeteer, Compiled for Government, Vol-V, B.R. Publishing Corporation, Delhi, 1927-1930
4. ಡಿ.ಶಿವಲಿಂಗಯ್ಯ (ಸಂ) ತುಮಕೂರು ಜಿಲ್ಲೆಯ ಸ್ಥಳನಾಮಗಳು, 2011
5. ಎಸ್.ಶ್ರೀಕಂಠಶಾಸ್ತ್ರಿ, ಹೊಯ್ಸಳ ವಾಸ್ತುಶಿಲ್ಪ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1965
6. ಕೂ.ಸ. ಅಪರ್ಣ, ದೇವಾಲಯ ವಾಸ್ತು ಪರಿಚಯ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1999